ಗುಬ್ಬಿ ತಾಲ್ಲೂಕಿನ ಸಿ.ಎಸ್. ಪುರ ಮುಖ್ಯ ರಸ್ತೆಯ ದುರಸ್ತಿ

959 (1521) - ಶ್ರೀ ವೀರಣ್ಣ ಗೌಡ ಎನ್.(ಗುಬ್ಬಿ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕೊಪ್ಪ, ಸಿ.ಎಸ್.ಪುರದ 4 ಕಿಲೋಮೀಟರ್ ವರೆಗಿನ ಮುಖ್ಯ ರಸ್ತೆಯ 30 ವರ್ಷಗಳ ಹಿಂದೆ ಡಾಂಬರೀಕರಣಗೊಳಿಸಲಾಗಿದ್ದು, ಇತ್ತೀಚಿಗೆ ಸಂಪೂರ್ಣವಾಗಿ ರಸ್ತೆಯು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಈ ರಸ್ತೆಯನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ;

ಇ. ಸದರಿ ರಸ್ತೆಯ ದುರಸ್ತಿಯನ್ನು ಈ ಸಾಲಿನ ಆಯವ್ಯಯದಲ್ಲಿಯೇ ಸೇರಿಸಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ. ಸದರಿ ರಸ್ತೆಯನ್ನು ಯಾವುದಾದರೂ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುವುದು.

ಇ. ಉತ್ತರವನ್ನು "ಅ" ನಲ್ಲಿ ನೀಡಲಾಗಿರುತ್ತದೆ.

ಗುಬ್ಬಿ ತಾಲ್ಲೂಕಿನ ನೆಲ್ಲಿಗೆರೆ-ಶಿರಾ ಜಿಲ್ಲಾ ಮುಖ್ಯ ರಸ್ತೆಯಲ್ಲಿನ ಸೇತುವೆಯ ದುರಸ್ತಿ ಕಾರ್ಯ

960 (1522) - ಶ್ರೀ ವೀರಣ್ಣ ಗೌಡ ಎನ್. (ಗುಬ್ಬಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ನೆಲ್ಲಿಗೆರೆ ಶಿರಾ ಜಿಲ್ಲಾ ಮುಖ್ಯ ರಸ್ತೆಯು ರಾಷ್ಟ್ರೀಯ ಹೆದ್ದಾರಿ-48 ಹಾಗೂ ರಾಷ್ಟ್ರೀಯ ಹೆದ್ದಾರಿ-4ನ್ನು ಸಂಪರ್ಕಿಸುವ ರಸ್ತೆಯಾಗಿದ್ದು, ಸದರಿ ರಸ್ತೆಯ 14ನೇ ಕಿಮೀ ನಲ್ಲಿ ಇರುವ ಸೇತುವೆಯು ನೂರಾರು ವರ್ಷಗಳಷ್ಟು ಹಳೆಯದಾಗಿದ್ದು, ಸದರಿ ಸೇತುವೆಯು 4 ವರ್ಷಗಳ ಹಿಂದೆ ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಸೇತುವೆಯನ್ನು ದುರಸ್ತಿಗೊಳಿಸಲು ಸರ್ಕಾರದ ವತಿಯಿಂದ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆಯೇ?

ಇ. ಕ್ರಮ ಕೈಗೊಳ್ಳದಿದ್ದ ಪಕ್ಷದಲ್ಲಿ 2002-03ರ ಆಯವ್ಯಯದಲ್ಲಿ ಸೇರಿಸಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಹೌದು.

ಆ. ಸದರಿ ಸೇತುವೆಯ ದುರಸ್ತಿಗೆ ರೂ. 19.50 ಲಕ್ಷಗಳಿಗೆ ಅಂದಾಜನ್ನು ತಯಾರಿಸಲಾಗಿದ್ದು ಕಾಮಗಾರಿಯನ್ನು ಯಾವುದಾದರೂ ಯೋಜನೆಯ ಅಡಿಯಲ್ಲಿ ಅನುದಾನ ಲಭ್ಯತೆ ಮೇರೆಗೆ ಕೈಗೆತ್ತಿಕೊಳ್ಳಲಾಗುವುದು.

ಇ. ಉಪ ಪ್ರಶ್ನೆ 'ಆ' ಉತ್ತರದಲ್ಲಿ ನೀಡಲಾಗಿರುತ್ತದೆ.